**2 ನೇ ಆಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಳ್ಳಾರಿ**

**ಸತ್ರ ಮೊಕದ್ದಮೆ ಸಂಖ್ಯೆ: 11/2024**

**ಪಿ.ಡಬ್ಲ್ಯು:3 ಸಿಡಬ್ಲ್ಯು:4**

ಸಾಕ್ಷಿಯ ಹೆಸರು : ಉಮಾ ನಾಯ್ಕ

ತಂದೆಯ ಹೆಸರು : ಮುನ್ಯಾನಾಯ್ಕ

ವಯಸ್ಸು : 40 ವರ್ಷ

ವೃತ್ತಿ : ವ್ಯವಸಾಯ

ವಾಸಸ್ಥಳ : ಸುಶೀಲಾ ನಗರ , ಸಂಡೂರು

**ಸತ್ಯಪ್ರತಿಜ್ಞೆ ಮಾಡಿದ ದಿನಾಂಕ: 23-07-2025**

**ಮುಖ್ಯ ವಿಚಾರಣೆ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದ:-**

**1)** ಹಾಜರಿರುವ ಆರೋಪಿತನ ಪರಿಚಯ ಇದೆ. ಅವನು ಸುಶೀಲಾನಗರ ಗ್ರಾಮದವನು. ನನಗೆ ಚಾಸಾ-5 ಇವರ ಪರಿಚಯ ಇದೆ. ನಾನು ಕನ್ನಡ ಭಾಷೆಯಲ್ಲಿ ಸಹಿ ಮಾಡುತ್ತೇನೆ. ನಾನು ಈಗ ನೋಡುತ್ತಿರುವ ಮೂರು ದಾಖಲೆಗಳಿಗೆ ನಾನು ಸಹಿ ಮಾಡಿರುತ್ತೇನೆ ಮೊದಲನೇ ದಾಖಲೆ ನೊಟೀಸು ಆಗಿದ್ದು ಅದನ್ನು ನಿಪಿ-2 ಅದರಲ್ಲಿಯ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಎರಡನೇ ದಾಖಲೆ ಜಪ್ತು ಪಂಚನಾಮೆಯಾಗಿದ್ದು ಅದನ್ನು ನಿಪಿ-3 ಎಂದು ಅದರಲ್ಲಿಯ ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಮೂರನೇ ದಾಖಲೆಗ ಕೈ ಬಹರದ ನಕ್ಷೆಯಾಗಿದ್ದು ಅದನ್ನು ನಿಪಿ-4 ಎಂದು ಅದರಲ್ಲಿಯ ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ನಾನು ಈ ದಾಖಲೆಗಳಿಗೆ ಸಂಡೂರು ಪೊಲೀಸ್ ಠಾಣೆಯಲ್ಲಿ 2 ವರ್ಷಗಳ ಹಿಂದೆ ಸಹಿ ಮಾಡಿರುತ್ತೇನೆ. ಪೊಲೀಸರು ಪಂಚನಾಮೆಗೆ ಎಂದು ನನ್ನ ಸಹಿ ಪಡೆದಿರುತ್ತಾರೆ. ನಾನು ಹೊಲಕ್ಕೆ ನೋಡಲು ಹೋದಾಗ ಪೊಲೀಸರು ಬಂದು ಪಂಚನಾಮೆಗೆ ಸಹಿ ಪಡೆದಿರುತ್ತಾರೆ. ಲಕ್ಷ್ಮ ನಾಯ್ಕ ಇವನಿಗೆ ಬಸವರಾಜ ಇವನು ಹಲ್ಲೆ ಮಾಡಿದ ಸಂಬಂಧ ಪೊಲೀಸರು ಪಂಚನಾಮೆಯನ್ನು ಬಸವರಾಜ ಮತ್ತು ಲಕ್ಷ್ಮ ನಾಯ್ಕ ಇವರ ಮನೆಯ ಹತ್ತಿರ ಮಾಡಿರುತ್ತಾರೆ. ಆ ಸಮಯದಲ್ಲಿ ಭಾವಚಿತ್ರಗಳನ್ನು ತೆಗೆದಿರುತ್ತಾರೆ. ಈಗ

ಭಾವಚಿತ್ರಗಳನ್ನು ನೋಡುತ್ತಿದ್ದು ಅದರಲ್ಲಿ ನಾನು, ಬಸವರಾಜ, ಪಿ.ಎಸ್.ಐ ಮೇಡಂ, ಮೂರ್ತಿನಾಯ್ಕು, ಪೊಲೀಸರು ಹಾಗೂ ಆರೋಪಿ ಇರುತ್ತೇವೆ. ಸದರಿ ಭಾವಚಿತ್ರ ಗಳನ್ನು ನಿಪಿ-5 ಹಾಗೂ 6 ಎಂದು ಗುರುತಿಸಲಾಯಿತು. ಇನ್ನೊಂದು ಭಾವಚಿತ್ರವನ್ನು ನೋಡುತ್ತಿದ್ದು ಅದನ್ನು ಆರೋಪಿಯ ಮನೆಯ ಹತ್ತಿರ ತೆಗೆದಿರುತ್ತಾರೆ. ಸದರಿ ಭಾವಚಿತ್ರವನ್ನು ನಿಪಿ-7 ಎಂದು ಗುರುತಿಸಲಾಯಿತು. ಕಲಂ 65 ಬಿ ಭಾರತೀಯ ಸಾಕ್ಷ್ಯ ಅಧಿನಿಯಮದ ಅಡಿಯಲ್ಲಿ ನೀಡಲಾದ ಪ್ರಮಾಣ ಪತ್ರ ವನ್ನು ನಿಪಿ-8 ಎಂದು ಗುರುತಿಸಲಾಯಿತು. ಸದರಿ ಪಂಚನಾಮೆ ಗೆ ಚಾಸಾ-5 ಕೂಡ ಸಹಿ ಮಾಡಿರುತ್ತಾರೆ. ಇಷ್ಟು ಬಿಟ್ಟು ಮತ್ತೇನೂ ಮಾಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿರುತ್ತಾರೆ. ಅವರ ವಾದವನ್ನು ಕೇಳಿ, ಸಾಕ್ಷಿಯ ಹೇಳಿಕೆಯನ್ನು ಹಾಗೂ ಮುಖ್ಯ ವಿಚಾರಣೆಯನ್ನು ಪರಿಶೀಲನೆ ಮಾಡಿ, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಸರ್ಕಾರಿ ಅಭಿಯೋಜಕರಿಗೆ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು).

ಪಾಟೀ ಸವಾಲು ಮಾನ್ಯ ಸಾರ್ವಜನಿಕ ಅಭಿಯೋಜಕರಿಂದಃ-

ನಾನು ಪೊಲೀಸ ಠಾಣೆಗೆ ಹೋದಾಗ ಆರೋಪಿತ ಅಲ್ಲಿ ಹಾಜರಿದ್ದ ಎಂದರೆ ಸರಿ. ಪೊಲೀಸರು ಆರೋಪಿತನು ಎಲ್ಲಿ ಕರೆದುಕೊಂಡು ಹೋಗುತ್ತಾನೆಯೋ ಮತ್ತು ಏನೂ ಹಾಜರು ಪಡಿಸುತ್ತಾನೆಯೋ ಆ ಬಗ್ಗೆ ಪಂಚನಾಮೆ ಮಾಡಬೇಕಾಗಿದೆ ಎಂದು ಹೇಳಿದ್ದರು ಎಂದರೆ ಸರಿ. ಲಕ್ಷ್ಮನಾಯ್ಕು ಇವನು ನನ್ನ ಮನೆಯ ಮುಂದೆ ಹೋಗುವಾಗ ನಾನು ಅವನನಿಗೆ ಕೊಲೆ ಮಾಡುವ ಉದ್ದೇಶದಿಂದ ಮಚ್ಚಿನಿಂದ ಆತನ ತಲೆಗೆ ಹಲ್ಲೆ ಮಾಡಿ ಸದರಿ ಮಚ್ಚನ್ನು ಮನೆಯಲ್ಲಿ ಇಟ್ಟಿರುತ್ತೇನೆ ಎಂದು ಹೇಳಿದ್ದ ಎಂದರೆ ಸರಿಯಲ್ಲ. ಆರೋಪಿತನು ನನ್ನ ಜೊತೆ ಬಂದರೆ ಸದರಿ ಮಚ್ಚನ್ನು ತೋರಿಸಿ ಹಾಜರು ಪಡಿಸುತ್ತೇನೆ ಎಂದು ಹೇಳಿದ್ದ ಎಂದರೆ ಸರಿಯಲ್ಲ. ಆರೋಪಿತನು ನನ್ನನ್ನು, ಪೊಲೀಸರನ್ನು, ಚಾಸಾ-5 ಇವರನ್ನು ಒಂದು ಖಾಸಗಿ ವಾಹನದಲ್ಲಿ ತನ್ನ ಮನೆಗೆ ಕರೆದುಕೊಂಡು ಹೋದ ಎಂದರೆ ಸರಿಯಲ್ಲ. ಆರೋಪಿತನು ತನ್ನ ಮನೆಯ ಮಂದೆ ಇರುವ ಜಾಗೆಯನ್ನು ತೋರಿಸಿ ಅಲ್ಲಿ ತಾನು ಲಕ್ಷ್ಮ ನಾಯಕ ಇವರಿಗೆ ಹಲ್ಲೆ ಮಾಡಿದ ಜಾಗೆ ಎಂದು ತೋರಿಸಿದ, ಅಲ್ಲಿ ರಕ್ತದ ಕಲೆ ಇತ್ತು ಎಂದರೆ ಸರಿಯಲ್ಲ.

ಆರೋಪಿತನು ತನ್ನ ಮನೆಯ ಮುಂದೆ ಇರುವ ಬಚ್ಚಲಿನಲ್ಲಿ ಮುಚ್ಚಿಟ್ಟಿದ್ದ ಈಗ ನೋಡುತ್ತಿರುವ ಮುಮಾ-3 ಮಚ್ಚನ್ನು ತೋರಿಸಿ ಹಾಜರುಪಡಿಸಿದ ಎಂದರೆ ಸರಿಯಲ್ಲ. ನಂತರ ಪೊಲೀಸರು ಅದನ್ನು ಬಿಳಿ ಅರವಿಯ ಚೀಲದಲ್ಲಿ ಪ್ಯಾಕ್ ಮಾಡಿ, ಸೀಲ ಮಾಡಿ ಅದರಲ್ಲಿ ಸಹಿ ಪಡೆದಿರುತ್ತಾರೆ, ನನ್ನ ಸಹಿ ಇರುವ ಚೀಟಿಯನ್ನು ಅಂಟಿಸಿರುತ್ತಾರೆ ಎಂದರೆ ಸರಿಯಲ್ಲ. ಪೊಲೀಸರು ಈ ಬಗ್ಗೆ ಪಂಚನಾಮೆ ಮಾಡಿ ಅದರಲ್ಲಿ ಬರೆದ ವಿಷಯಗಳನ್ನು ಓದಿ ಹೇಳಿರುತ್ತಾರೆ ಎಂದರೆ ಸರಿಯಲ್ಲ. ಪಂಚನಾಮೆ ಮಾಡುವ ಕಾಲಕ್ಕೆ ನಿಪಿ-4 ನಕ್ಷೆಯನ್ನು ತಯಾರಿಸಿ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಸಮಕ್ಷಮ ಪಂಚನಾಮೆ ಮಾಡಿ ಮುಮಾ-3 ಮಚ್ಚನ್ನು ನಮ್ಮ ಸಮಕ್ಷಮ ಜಪ್ತು ಪಡಿಸಿಕೊಂಡರು ಕೂಡ ಆರೋಪಿತನು ನಮ್ಮ ಊರಿನವನು ಇರುವುದರಿಂದ ಅವನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀಸವಾಲು ಆರೋಪಿ ಪರವಾಗಿ ಶ್ರೀ ಎನ್.ಬಿ.ಕೆ ವಕೀಲರು ಎಲ್.ಎ.ಡಿ.ಸಿ ರವರಿಂದ</u>

ಚಾಸಾ-1 ಹಾಗೂ ಆರೋಪಿತರು ಇಬ್ಬರು ನನಗೆ ಸಂಬಂಧಿಕರು. ನನ್ನ ಹಾಗೂ ಚಸಾ-1 ಇವರ ಮನೆ ಅಕ್ಕಪಕ್ಕದಲ್ಲಿ ಇದೆ ಎಂದರೆ, ನನ್ನ, ಚಾಸಾ-1 ಹಾಗೂ ಆರೋಪಿತನ ಮನೆ ಎಲ್ಲವೂ ಅಕ್ಕಪಕ್ಕದಲ್ಲಿವೆ ಎಂದು ಸಾಕ್ಷಿ ಉತ್ತರಿಸುತ್ತಾರೆ. ಅಲ್ಲಿ ಬಹಳಷ್ಟು ಬೇರೆ ಬೇರೆ ಸಮುದಾಯದ ಮನೆಗಳು ಇವೆ ಎಂದರೆ ಸರಿ. ಪೊಲೀಸರು ಮನೆಯ ಹತ್ತಿರ ಭಾವಚಿತ್ರಗಳನ್ನು ತೆಗೆದಿಲ್ಲ ಎಂದರೆ ಸರಿಯಲ್ಲ. ಚಾಸಾ-1 ಇವರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ.

**C/c,** 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಳ್ಳಾರಿ.